

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಒಬ್ಬೊಬ್ಬರಿಗೆ ಒಂದೊಂದು 'ಹುಚ್ಚು'!

ಎರಡು ವಾರಗಳ ಹಿಂದೆ ನೂರೆಂಟುಮಾತಿನ ಅಂಕಣದಲ್ಲಿ ಸಂಪಾದಕರಾದ ವಿಶ್ವೇಶ್ವರ ಭಟ್ಟರು ಐಫೋನ್, ಐಪಾಡ್ ಮುಂತಾದ ಆ್ಯಪಲ್ ಕಂಪನಿಯ ಪ್ರಾಡಕ್ಟ್‌ಗಳ ಬಗ್ಗೆ ತಮಗಿರುವ ಹುಚ್ಚನ್ನು ಮುಚ್ಚುಮರೆಯಿಲ್ಲದೆ ಹೇಳಿಕೊಂಡಿದ್ದಾರೆ. ಯಾವಾಗಲಾದರೊಮ್ಮೆ ಅವರೊಂದಿಗೆ ಫೋನಿನಲ್ಲಿ ಮಾತನಾಡಿದಾಗ ಆ್ಯಪಲ್ ಕಂಪ್ಯೂಟರ್ ಬಗ್ಗೆ ಅವರು ಮೆಚ್ಚುಗೆ ಮಾತುಗಳನ್ನಾಡಿ ಅದನ್ನು ಬಳಸಲು ಶಿಫಾರಿಸ್ಸು ಮಾಡಿದ್ದೂ ಉಂಟು. ಈ ಜಗತ್ತಿನಲ್ಲಿ ಒಬ್ಬೊಬ್ಬರಿಗೆ ಒಂದೊಂದು ಹುಚ್ಚು: ಹಣದ ಹುಚ್ಚು, ಅಧಿಕಾರದ ಹುಚ್ಚು, ಹೆಣ್ಣಿನ ಹುಚ್ಚು, ಗಂಡಿನ ಹುಚ್ಚು, ಸಿನಿಮಾ ಹುಚ್ಚು, ನಾಟಕದ ಹುಚ್ಚು, ಸಂಗೀತದ ಹುಚ್ಚು, ಸಾಹಿತ್ಯದ ಹುಚ್ಚು ಇತ್ಯಾದಿ ಇತ್ಯಾದಿ. ಅದಕ್ಕಾಗಿ ಏನೆಲ್ಲ ಯಾತ್ರೆಗಳು ಮತ್ತು ಮೆರವಣಿಗೆ-ಉರವಣಿಗೆಗಳು! ಒಟ್ಟಾರೆ ಈ ಪ್ರಪಂಚ ಒಂದು 'ಹುಚ್ಚರ' ಸಂತೆ ಎಂದು ಹೇಳಿದರೆ ತಪ್ಪಾಗಲಾರದು. ಒಮ್ಮೆ ಪ್ರಧಾನಿ ಜವಾಹರಲಾಲ್ ನೆಹರೂರವರು ಒಂದು ಹುಚ್ಚರ ಆಸ್ಪತ್ರೆಗೆ ಭೇಟಿ ನೀಡಿದ್ದರಂತೆ. ಆಸ್ಪತ್ರೆಯ ವೈದ್ಯಾಧಿಕಾರಿಗಳೊಂದಿಗೆ ಪ್ರತಿಯೊಂದು ವಾರ್ಡಿಗೂ ಹೋಗಿ ಹುಚ್ಚರನ್ನು ಮಾತನಾಡಿಸುತ್ತಾ ಮುಂದೆ ಸಾಗಿದರು. ಒಬ್ಬ ಹುಚ್ಚ ಅವರನ್ನು ತಡೆದು ನಿಲ್ಲಿಸಿ "ನೀವು ಯಾರು?" ಎಂದು ಕೇಳಿದನಂತೆ. ನೆಹರೂ ಆ ಹುಚ್ಚನ ಮೈದಡವಿ "ನಾನು ಈ ದೇಶದ ಪ್ರಧಾನಿ" ಎಂದು ಹೇಳಿದರು. ಅದಕ್ಕೆ ಆ ಹುಚ್ಚ ಗಹಗಹಿಸಿ ನಗುತ್ತಾ "ನಾನೂ ಈ ಆಸ್ಪತ್ರೆಗೆ ಬರುವ ಮುಂಚೆ ನಿಮ್ಮ ಹಾಗೆಯೇ ಹೇಳುತ್ತಿದ್ದೆ, ಈಗ ನೀವು ಇಲ್ಲಿಗೆ ಬಂದಿದ್ದೀರಿ, ಈ ವೈದ್ಯರ ಚಿಕಿತ್ಸೆಯಿಂದ ಎಲ್ಲಾ ಸರಿಹೋಗುತ್ತೀರಿ" ಎಂದು ಹೇಳಿದನಂತೆ!

ಆಧುನಿಕ ಮನಃಶಾಸ್ತ್ರಜ್ಞರ ಪ್ರಕಾರ ಈ ಜಗತ್ತಿನಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯೂ ಒಂದಲ್ಲ ಒಂದು ರೀತಿಯ ಹುಚ್ಚರು. ಹುಚ್ಚಿನ ಶೇಕಡವಾರು ಪ್ರಮಾಣದಲ್ಲಿ ಮಾತ್ರ ವ್ಯತ್ಯಾಸ. Normal ಎನಿಸಿಕೊಂಡ ವ್ಯಕ್ತಿಯೂ ಸಹ ಕೆಲವು ಸಂದರ್ಭಗಳಲ್ಲಿ ubnormal ಆಗಿ ವರ್ತಿಸುತ್ತಾನೆ. ದೈನಂದಿನ ಸಂಭಾಷಣೆಯಲ್ಲಿ ಮಾತಿನ ಮಧ್ಯೆ 'ಹೀಗೆಲ್ಲಾ ಹುಚ್ಚರಂತೆ ಮಾತನಾಡಬೇಡ' ಎಂದು ಉದ್ಗರಿಸುವುದನ್ನು ನೀವು ಕೇಳಿರಬಹುದು. ಇನ್ನು ಕೆಲವರು ಜೀವನದಲ್ಲಿ ಏನಾಗಿರಬೇಕೋ ಅದಾಗಿರದೆ ಬೇರೆ ರೀತಿಯ ಹುಚ್ಚು ಹಚ್ಚಿಕೊಂಡವರೂ ಇದ್ದಾರೆ. ಇದಕ್ಕೆ ಕರ್ನಾಟಕದ ಮಠ-ಪೀಠಗಳಲ್ಲಿ ಇತ್ತೀಚೆಗೆ ನಡೆದ ಕೆಲವು ಪ್ರಕರಣಗಳು ಸಾಕ್ಷಿಯಾಗಿವೆ. ಸಂನ್ಯಾಸಿಗಳಾಗಿದ್ದರೆ ಸಂಸಾರದ ಹುಚ್ಚು, ಸಂಸಾರಿಗಳಾಗಿದ್ದರೆ ಸಂನ್ಯಾಸದ ಹುಚ್ಚು. "ಮಾನವಜನ್ಮ ದೊಡ್ಡದು, ಇದ ಹಾಳು ಮಾಡಲಿಬೇಡಿ ಹುಚ್ಚಪ್ಪಗಳಿರಾ!" ಎಂದು ಎಚ್ಚರಿಸಿದರು ಪುರಂದರದಾಸರು. ಧನಕನಕ ಸಂಪತ್ತು ಮಡದಿ ಮಕ್ಕಳ ಮೋಹಪಾಶದಲ್ಲಿ ಬಂಧಿತರಾದ ಜನರು ದಾಸರ ಪಾರಲೌಕಿಕ ಕಣ್ಣುಗಳಿಗೆ ಹುಚ್ಚರಾಗಿ ಕಾಣಿಸಿದರೆ, ಅವುಗಳನ್ನು ಧಿಃಕರಿಸಿ ಮನೆ ಮಠ ಬಿಟ್ಟು ತಂಬೂರಿ ಹಿಡಿದು ಪದುಮನಾಭನ ಗುಣಗಾನ ಮಾಡುತ್ತಾ ಹೊರಟ ದಾಸರು ಜನರ ಲೌಕಿಕ ಕಣ್ಣುಗಳಿಗೆ ಹುಚ್ಚರಾಗಿ ಕಾಣಿಸುತ್ತಾರೆ.

ನಮ್ಮ ಜಿಲ್ಲೆಯಲ್ಲೊಬ್ಬರು ಒಳ್ಳೆಯ ಸಂಸಾರಿಗಳಾಗಿದ್ದೂ ನಾಮದ ಬಲದಿಂದ 'ಸ್ವಾಮಿ'ಗಳಾಗಿದ್ದಾರೆ. ಅವರು ಬೇರೆ ಯಾರೂ ಅಲ್ಲ ನಮ್ಮ ಸಂಪಾದಕರ ಆತ್ಮೀಯ ಸ್ನೇಹಿತರಾದ, ಚಿತ್ರದುರ್ಗಕ್ಷೇತ್ರದ ಲೋಕಸಭಾ ಸದಸ್ಯರಾದ ಜನಾರ್ದನಸ್ವಾಮಿಯವರು. ಯುವ ವಯಸ್ಸಿನ ಸಾಫ್ಟ್‌ವೇರ್ ಎಂಜಿನಿಯರ್ ಆದ ಅವರು ಅಮೇರಿಕೆಯಲ್ಲಿ ಕ್ಯಾಲಿಫೋರ್ನಿಯಾದ ಸನ್ ಮೈಕ್ರೋಸಿಸ್ಟಂ ಕಂಪನಿಯಲ್ಲಿ ಮುಖ್ಯ ಎಂಜಿನಿಯರಾಗಿ ಹತ್ತಾರು ವರ್ಷಗಳ ಕಾಲ ಇದ್ದರು. ವರ್ಷದ ಹಿಂದೆ ಚಿತ್ರದುರ್ಗ ಕ್ಷೇತ್ರದಿಂದ ಸ್ಪರ್ಧಿಸ ಬಯಸಿ ನಮ್ಮ ಆಶೀರ್ವಾದವನ್ನು ಪಡೆಯಲು ಮಠಕ್ಕೆ ಬಂದಿದ್ದರು. ಇಂದಿನ ಕೊಳಕು ರಾಜಕೀಯದಲ್ಲಿ ಗೆಲ್ಲುವುದು ಕಷ್ಟ, ಬೇಡವೆಂದು ಹೇಳಿದರೂ ಕೇಳಲಿಲ್ಲ. ದೈವಕೃಪೆಯಿಂದ ಜನಬೆಂಬಲ ಪಡೆದು ವಿಜೇತರಾದರು. ಇತ್ತೀಚೆಗೆ ಅವರು ಪಾರ್ಲಿಮೆಂಟ್ ಸದಸ್ಯರ ನಿಯೋಗದೊಂದಿಗೆ ಅಮೇರಿಕೆಗೆ ಹೋಗಿದ್ದರು. ಹಿಂದಿರುಗಿ ಬರುವಾಗ, ನೂರೆಂಟುಮಾತಿನ ಅಂಕಣದಲ್ಲಿ ಸಂಪಾದಕರು ಐಪಾಡ್ ಕುರಿತು ಬರೆದ ಲೇಖನ ಪ್ರಕಟವಾದ ಹಿಂದಿನ ಸಂಜೆಯಷ್ಟೇ ಜನಾರ್ದನಸ್ವಾಮಿ ನಮಗೆ

ಕೊಡಲೆಂದು ಒಂದು ಐಪಾಡನ್ನು ತಂದಿದ್ದರು. ಅದರಲ್ಲಿ ನಮ್ಮ ದೇಶದ ರೈತರಿಗೆ ಸರಕಾರ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಹೇಗೆ ಅನುಕೂಲ ಮಾಡಿಕೊಡಬಹುದೆಂದು ಸವಿಸ್ತಾರವಾಗಿ ವಿವರಿಸಿದರು. ಅಮೇರಿಕೆಯಲ್ಲಿ ಲಕ್ಷಾಂತರ ಡಾಲರ್ ಸಂಪಾದಿಸುವ ದೊಡ್ಡ ಹುದ್ದೆಯಲ್ಲಿದ್ದು ರಾಜಿನಾಮೆ ಕೊಟ್ಟು ಬಂದ ಜನಾರ್ದನಸ್ವಾಮಿಯವರು ಅವರ ಸ್ನೇಹಿತರಿಗೆ ಹುಚ್ಚರಾಗಿ ಕಾಣಿಸುತ್ತಾರೆ. ಅವರದು ಖಂಡಿತಾ ರಾಜಕೀಯ ಹುಚ್ಚಲ್ಲ, ದೇಶಸೇವೆಯ ಹುಚ್ಚು ಎಂಬುದು ಅವರನ್ನು ನಿಕಟವಾಗಿ ಬಲ್ಲವರಿಗೆ ಗೊತ್ತು.

"If you want to kill a dog, name it mad" ಎಂಬ ಮಾತೊಂದು ಆಂಗ್ಲಭಾಷೆಯಲ್ಲಿದೆ. ಅಂದರೆ ಯಾವುದಾದರೂ ನಾಯಿಯನ್ನು ಕೊಲ್ಲಬೇಕೆಂದು ನಿಮಗೆ ಮನಸ್ಸಿದ್ದರೆ ನೀವೇ ಕಲ್ಲು ಹೊಡೆದು ಸಾಯಿಸುವುದು ಬೇಕಾಗಿಲ್ಲ. ಅದನ್ನು ಹುಚ್ಚುನಾಯಿಯೆಂದು ಕರೆಯಿರಿ ಸಾಕು, ಆಗ ದಾರಿಯಲ್ಲಿ ಓಡಾಡುವವರೆಲ್ಲರೂ ಒಂದೊಂದು ಕಲ್ಲುಹೊಡೆದು ಸಾಯಿಸುತ್ತಾರೆ ಎಂದು ಇದರ ಶಾಬ್ದಿಕ ಅರ್ಥ. ಇದು ಬೆಂಗಳೂರಿನಲ್ಲಿ ಇತ್ತೀಚೆಗೆ ಶಾಲಾ ಮಕ್ಕಳನ್ನು ಕಚ್ಚಿ ಸಾಯಿಸುತ್ತಿರುವ ಬೀದಿ ನಾಯಿಗಳನ್ನು ಕುರಿತು ಹೇಳಿದ ಮಾತಲ್ಲ. ತಮಗಾಗದವರ ಬಗ್ಗೆ ಬೇರೆಯವರಿಗೆ ಚಾಡಿ ಮಾತು ಹೇಳಿ ಹೇಗೆ ಉಪಾಯದಿಂದ ಅವರನ್ನು ಮುಗಿಸಬಹುದು ಎಂದು ಹೇಳಿಕೊಡುವ ಕುಯುಕ್ತಿಯ ಮಾತಿದು. ಚಾಡಿಕೋರರನ್ನು ಕುರಿತು ಸಂಸ್ಕೃತದಲ್ಲಿ ಒಂದು ಸುಭಾಷಿತವಿದೆ:

**ಅಹೋ ಖಲಭುಜಂಗಾನಾಂ ವಿಪರೀತೋ ಹಿ ವಧಕ್ರಮಃ ।**
**ಕರ್ಣೌ ದಶತ್ಯೇಕಸ್ಯ ಪ್ರಾಣೈರನ್ಯೋ ವಿಯುಜ್ಯತೇ ॥**

ಇದರ ಅರ್ಥ: ಹಾವು ಕಚ್ಚುವುದಕ್ಕೂ ಮನುಷ್ಯ ಕಚ್ಚುವುದಕ್ಕೂ ಒಂದು ಪ್ರಮುಖವಾದ ವ್ಯತ್ಯಾಸವಿದೆ. ವಿಷಜಂತುವಾದ ನಾಗರಹಾವು ಯಾರನ್ನು ಕಚ್ಚುತ್ತದೆಯೋ ಅವನು ಸಾಯುತ್ತಾನೆ. ಆದರೆ ಮನುಷ್ಯನೆಂಬ ವಿಷಸರ್ಪ ಒಬ್ಬರ ಕಿವಿಯನ್ನು ಕಚ್ಚಿದರೆ ಅದರ ಪರಿಣಾಮವಾಗಿ ಬೇರೊಬ್ಬನು ಸಾಯುತ್ತಾನೆ. ಒಬ್ಬರ ಚಾಡಿಮಾತುಗಳನ್ನು ಕೇಳಿ ಸಿಟ್ಟಿಗೆದ್ದ ವ್ಯಕ್ತಿ ವಿಚಾರಮಾಡದೆ ಬೇರೊಬ್ಬರ ಮೇಲೆ ಹರಿಹಾಯುತ್ತಾನೆ.

'ಅವನು ಸಾಮಾನ್ಯದವನಲ್ಲ, ಮಹಾವಿಷಕಂಠಕ' ಎಂಬ ಮಾತನ್ನು ನೀವು ಹಳ್ಳಿಗಳಲ್ಲಿ ಕೇಳಿರಬಹುದು. 'ವಿಷಕಂಠ' ಎಂಬ ಶಬ್ದಕ್ಕೆ ಸಂಸ್ಕೃತದಲ್ಲಿರುವ ಅರ್ಥವೇ ಬೇರೆ, ಕನ್ನಡದಲ್ಲಿರುವ ಅರ್ಥವೇ ಬೇರೆ. ಸಂಸ್ಕೃತದಲ್ಲಿ 'ವಿಷಕಂಠ' ಎಂದರೆ 'ಶಿವ' (ವಿಷಂ ಕಂಠೇ ಯಸ್ಯ ಸಃ - ಸಮಾನಾಧಿಕರಣ ಬಹುವ್ರೀಹಿ ಸಮಾಸ). ಪುರಾಣಗಳ ಪ್ರಕಾರ ದೇವತೆಗಳು ಮತ್ತು ದಾನವರು ಮಂದಾರ ಪರ್ವತವನ್ನು ಕಡಗೋಲನ್ನಾಗಿಯೂ, ವಾಸುಕಿಯನ್ನು ಹಗ್ಗವನ್ನಾಗಿಯೂ ಮಾಡಿಕೊಂಡು ಸಮುದ್ರಮಥನ ಮಾಡಿದ ಸಂದರ್ಭದಲ್ಲಿ ಮೊದಲಿಗೆ ಹೊರಬಂದದ್ದು ವಿಷ. ಅದರಿಂದ ಭಯಭೀತಿಗೊಂಡು ಎಲ್ಲರೂ ಕಾಲ್ಕಿತ್ತಾಗ ಆಸರೆಗೆ ಬಂದ ಶಿವ ಆ ವಿಷವನ್ನು ಕೈಗೆತ್ತಿಕೊಂಡು ಕುಡಿದ. ನೋಡಿ ಹೌಹಾರಿದ ಪಾರ್ವತಿ ಗಂಡನ ಕೊರಳನ್ನು ಬಿಗಿಹಿಡಿದು ನಿಲ್ಲಿಸಿದಳು. ಅದರ ಪರಿಣಾಮವಾಗಿ ವಿಷವು ಶಿವನ ಗಂಟಲಿನಲ್ಲಿಯೇ ಉಳಿಯಿತು. ಹೀಗೆ ಜಗತ್ತಿನ ಜನರ ಪ್ರಾಣವನ್ನು ಉಳಿಸಲೋಸುಗ ವಿಷವನ್ನು ಕುಡಿದ ಶಿವನು 'ವಿಷಕಂಠ' ಎನಿಸಿದ. ಸಂಸ್ಕೃತದ 'ವಿಷಕಂಠ'ನೇ ಕನ್ನಡದ 'ನಂಜುಂಡೇಶ್ವರ'. ಆದರೆ ಅಪ್ಪಟ ಕನ್ನಡ ಶಬ್ದವಾದ 'ನಂಜುಂಡ'ನಿಗೆ ಇಲ್ಲದೇ ಇರುವ ಅಪಾರ್ಥ ಸಂಸ್ಕೃತದ 'ವಿಷಕಂಠ' ಶಬ್ದಕ್ಕೆ ಬಂದಿದೆ. ಅದೇಕೋ ಏನೋ ಕನ್ನಡಿಗರ ನಾಲಗೆಯಲ್ಲಿ 'ವಿಷಕಂಠ' ಎಂದರೆ ಶಿವನಂತೆ ತಾನು ವಿಷ ಸೇವಿಸಿ ಇನ್ನೊಬ್ಬರ ಪ್ರಾಣ ಉಳಿಸುವ ವ್ಯಕ್ತಿಯಲ್ಲ, ತನ್ನೊಳಗಿರುವ ದ್ವೇಷದ ವಿಷವನ್ನು ಕಾರಿ ಇನ್ನೊಬ್ಬರ ಪ್ರಾಣ ತೆಗೆಯುವ ಧೂರ್ತವ್ಯಕ್ತಿ!

ಪ್ರತಿ ಸೋಮವಾರದಂದು ಸಿರಿಗೆರೆಯಲ್ಲಿ ನಡೆಯುವ ನಮ್ಮ "ಸದ್ಧರ್ಮ ನ್ಯಾಯಪೀಠ"ದ ಮುಂದೆ ಇಂತಹ ಒಂದು ಪ್ರಕರಣ ಬಂದಿತ್ತು. ಒಬ್ಬ ಯುವ ಮಹಿಳೆ ತನ್ನ ಮೂರ್‍ನಾಲ್ಕು ವರ್ಷದ ಮಗುವಿನೊಂದಿಗೆ ತನ್ನ ಗಂಡನ ವಿರುದ್ಧ ದೂರು ತೆಗೆದುಕೊಂಡು ಬಂದಿದ್ದಳು. ಪತಿ-ಪತ್ನಿಯರ ಮಧ್ಯೆ ವಿರಸ ಉಂಟಾಗಿ ಅವಳು ತವರು ಮನೆ ಸೇರುವಂತಾಗಿತ್ತು. ಅದಕ್ಕೆ ಕಾರಣ ಅವಳ ಗಂಡನ ಮನೆಯಲ್ಲಿ ಎಲ್ಲರೂ ಆಕೆಗೆ ಹುಚ್ಚಿಯ ಪಟ್ಟವನ್ನು ಕಟ್ಟಿದ್ದರು. ಆಕೆಯ ಗಂಡನಿಗೆ ನೋಟೀಸು ಕೊಟ್ಟು ಕರೆಸಿ ವಿಚಾರಣೆ ಆರಂಭಿಸಿದಾಗ ಅವಳ ಕೆಲವು ನಡವಳಿಕೆಗಳು ಬಾಲಿಶವಾಗಿ ಕಂಡುಬಂದವು. ಆದರೆ ಅವಳು ಹುಚ್ಚಿಯಾಗಿರಲಿಲ್ಲ. ಹತ್ತಿರದ ಸಂಬಂಧಿಕರೆಲ್ಲರೂ ಆಕೆಯನ್ನು ಹುಚ್ಚಿ, ಹುಚ್ಚಿ ಎಂದು ಚುಚ್ಚು ಮಾತುಗಳನ್ನಾಡಿ ಆಕೆಯ ಮನಸ್ಸು ರೋಸಿಹೋಗುವಂತೆ ಮಾಡಿದ್ದರು. ನಮಗೆ ಪರಿಚಿತರಿರುವ ಮನೋರೋಗತಜ್ಞರ ಬಳಿ ತಪಾಸಣೆ ಮಾಡಿಸಿಕೊಂಡು ಬರಲು ಸೂಚಿಸಿದಂತೆ ಅವಳ ತಂದೆ-ತಾಯಿಗಳು ವೈದ್ಯರ ಹತ್ತಿರ ತೋರಿಸಿಕೊಂಡೂ ಬಂದರು. ವೈದ್ಯರು ಆಕೆಗೆ ಯಾವ ಹುಚ್ಚೂ ಇಲ್ಲವೆಂದು ಸ್ಪಷ್ಟವಾಗಿ ವರದಿ ಮಾಡಿದರು. ಗಂಡನಿಗೂ ಆಕೆಗೂ ವಯಸ್ಸಿನಲ್ಲಿ ಸ್ವಲ್ಪ ಅಂತರ. ಗಂಡನಿಗೆ ತನ್ನ ತಂದೆ-ತಾಯಂದಿರ ಮೇಲೆ ಬಹಳ ಪ್ರೀತಿ. ತನ್ನ ಹೆಂಡತಿ ಅವರನ್ನು ಅಷ್ಟೇ ಪ್ರೀತಿಯಿಂದ ನೋಡಿಕೊಳ್ಳಬೇಕೆಂಬ ಅವನ ನಿರೀಕ್ಷೆ ಹುಸಿಯಾಯಿತು. ಯುವ ವಯಸ್ಸಿಗೆ ಸಹಜವಾದ ಆ ಮಹಿಳೆಯ ಕನಸುಗಳು ಭಗ್ನಗೊಂಡವು.

ಗಂಡ ಆಕೆಗಾಗಿ ಬೇರೆ ಮನೆ ಮಾಡಿದ. ಆದರೂ ಸುಧಾರಿಸಲಿಲ್ಲ. ಹೆಂಡತಿಯ ಚಾರಿತ್ರ್ಯದ ಬಗ್ಗೆ ಗಂಡನಿಗೆ ಎಳ್ಳಷ್ಟೂ ಅನುಮಾನವಿಲ್ಲ. ಗಂಡನ ಚಾರಿತ್ರ್ಯದ ಬಗ್ಗೆ ಹೆಂಡತಿಗೂ ಯಾವ ಅಪನಂಬಿಕೆ ಇಲ್ಲ. ಆದರೂ ಗಂಡನನ್ನು ಹಂಗಿಸಿ ಮಾತನಾಡುತ್ತಿದ್ದಳು. ವಿರಸಕ್ಕೆ ನಾಂದಿಯಾಯಿತು. ಒಂದು ದಿನ ಹೇಳದೆ ಕೇಳದೆ ತನ್ನ ಮಗುವಿನೊಂದಿಗೆ ಆಕೆ ತವರು ಮನೆ ಸೇರಿದಳು. ದೀರ್ಘಕಾಲ ಹೆಂಡತಿ ವಾಪಾಸು ಬಾರದ ಕಾರಣ ಸಿಟ್ಟಿಗೆದ್ದ ಗಂಡ ವಿವಾಹ ವಿಚ್ಛೇದನ ಕೋರಿ ಕೋರ್ಟಿನಲ್ಲಿ ಕೇಸು ದಾಖಲಿಸಿದ. ಹೆಂಡತಿ ಹತಾಶಳಾಗಿ ಆತ್ಮಹತ್ಯೆ ಮಾಡಿಕೊಳ್ಳುವ ಪ್ರಯತ್ನ ನಡೆಸಿದಳು. ಆತ್ಮಹತ್ಯೆ ಪ್ರಯತ್ನಕ್ಕೆ ಅಳಿಯನೇ ಕಾರಣವೆಂದು ಆಕೆಯ ತಂದೆ ಪೋಲೀಸರಿಗೆ ದೂರು ಸಲ್ಲಿಸಿದ. ಪೋಲೀಸರು ಗಂಡನನ್ನು ಬಂಧಿಸಿ ಜೈಲಿಗೆ ಕಳುಹಿಸಿದರು. ಗಂಡ ಕೆಲವು ದಿನಗಳ ನಂತರ ಜಾಮೀನಿನ ಮೇಲೆ ಬಿಡುಗಡೆ ಹೊಂದಿ ಬಂದ. ಆಸ್ಪತ್ರೆಯಿಂದ ಚೇತರಿಸಿಕೊಂಡು ಹೆಂಡತಿ ತವರು ಮನೆಗೆ ವಾಪಾಸು ಬಂದಳು. ಅತ್ತ ಜೈಲಿನ ಕಹಿ ಅನುಭವದಿಂದ ಹೊರಬಂದ ಆಕೆಯ ಗಂಡ ಮತ್ತಷ್ಟೂ ಹೆಂಡತಿಯನ್ನು ದ್ವೇಷಿಸತೊಡಗಿದ. ಇತ್ತ ಗಂಡನ ಮನೆಗೆ ಹೋಗಬೇಕೆಂದು ಹೆಂಡತಿ ಚಡಪಡಿಸತೊಡಗಿದಳು. ಇಬ್ಬರನ್ನೂ ಕೂರಿಸಿಕೊಂಡು ಎಷ್ಟೇ ತಿಳಿಹೇಳಿದರೂ ಹೆಂಡತಿಯನ್ನು ಮನೆಗೆ ಬಿಟ್ಟುಕೊಳ್ಳಲು ಗಂಡ ಸಿದ್ಧನಿಲ್ಲ. ಗಂಡಹೆಂಡಿರ ಜಗಳದಲ್ಲಿ ಕೂಸು ಬಡವಾಯಿತು ಎಂಬ ಗಾದೆಯ ಮಾತಿನಂತೆ ಏನೂ ಅರಿಯದ ಮಗುವಿನ ಸ್ಥಿತಿಯನ್ನು ನೋಡಿ ನಮಗೆ ಮರುಕ!

ಎಲ್ಲರೂ ತಮ್ಮ ಮೂಗಿನ ನೇರಕ್ಕೇ ಯೋಚಿಸುತ್ತಾರೆ. ಕ್ಷಣಕಾಲವೂ ಇತರರ ಕಣ್ಣುಗಳಿಂದ ತಮ್ಮನ್ನು ನೋಡಿಕೊಳ್ಳುವುದಿಲ್ಲ. ತನ್ನಿಂದ ಇನ್ನೊಬ್ಬರಿಗೆ ಏನಾಗಬೇಕೆಂದು ಯೋಚಿಸುವ ಗೋಜಿಗೆ ಹೋಗದೆ ಇನ್ನೊಬ್ಬರಿಂದ ತನಗೇನಾಗಬೇಕೆಂದು ಯೋಚಿಸುವವರೇ ಜಾಸ್ತಿ. 'ತಾನೊಂಟೋ ಮೂರುಲೋಕ ಉಂಟೋ' ಎಂಬುದು ಅಂಥವರ ಜೀವನದ ಧ್ಯೇಯವಾಕ್ಯ. ನಮ್ಮ ಮಠದ ವಾರ್ಷಿಕ ಸಮಾರಂಭವಾದ 'ತರಳಬಾಳು ಹುಣ್ಣಿಮೆ ಮಹೋತ್ಸವ'ದಲ್ಲಿ ಹಳ್ಳಿಯ ಜನರು ಬಹಳ ಇಷ್ಟಪಡುವ ಪ್ರಮುಖ ಭಾಷಣಕಾರರಲ್ಲಿ ಇಳಕಲ್ಲಿನ ಕಾಲೇಜೊಂದರ ಪ್ರಾಧ್ಯಾಪಕರಾದ ಶಂಭು ಬಳಿಗಾರ್ ಅವರೂ ಒಬ್ಬರು. ಜಾನಪದ ಸೊಗಡಿನಿಂದ ಕೂಡಿದ ಅವರ ಮಾತಿನ ಶೈಲಿ ಕೇಳುಗರ ಕಿವಿಗೆ ತುಂಬಾ ಹಿತಕರ. ಅವರು ಹೇಳುವ ರೋಚಕವಾದ ಕಥೆ ಹೀಗಿದೆ:

ಒಬ್ಬ ಹಳ್ಳಿ ರೈತ ತನ್ನ ಜಮೀನು ಉಳುಮೆ ಮಾಡಲು ಎತ್ತುಗಳನ್ನು ಹೊಡೆದುಕೊಂಡು ಹೋಗುತ್ತಿದ್ದ. ಎದುರಿಗೆ ಸಿಕ್ಕ ಅಪರಿಚಿತ ವ್ಯಕ್ತಿಯೊಬ್ಬ ತಾನು ಹೋಗಬೇಕೆಂದಿದ್ದ ಊರಿನ ದಾರಿಯನ್ನು ಕೇಳಿದ. ರೈತನಿಗೆ ಕಿವಿ ಅಷ್ಟಾಗಿ ಕೇಳಿಸುತ್ತಿರಲಿಲ್ಲ. ತನ್ನ ಜಮೀನು ಎಷ್ಟಿದೆಯೆಂದು ಆ ವ್ಯಕ್ತಿ ಕೇಳುತ್ತಿದ್ದಾನೆಂದು ತಪ್ಪು ಗ್ರಹಿಸಿ ಕೈಯಲ್ಲಿದ್ದ ಬಾರಿಕೋಲನ್ನು ಎತ್ತಿಹಿಡಿದು ಸುತ್ತಾ ತೋರಿಸಿ 'ಇದೆಲ್ಲಾ ನನ್ನದೇ ಜಮೀನು' ಎಂದು ಹೇಳಿದ. ಜಮೀನು ಉಳುಮೆ ಮಾಡಿ ದಣಿದ ರೈತ ಸಂಜೆ ಮನೆಗೆ ಬಂದ. ದಾರಿಯಲ್ಲಿ ಸಿಕ್ಕ ವ್ಯಕ್ತಿ ತನ್ನ ಜಮೀನು ವಿಚಾರವಾಗಿ ಕೇಳಿದ್ದನ್ನು ಹೆಂಡತಿಗೆ ಹೆಮ್ಮೆಯಿಂದ ವಿವರಿಸಿದ. ಹೆಂಡತಿಗೂ ಕಿವಿ ಸರಿಯಾಗಿ ಕೇಳಿಸುತ್ತಿರಲಿಲ್ಲ. ತನಗೆ ಯಾವ ಒಡವೆ ಮಾಡಿಸಬೇಕೆಂದು ಗಂಡ ಕೇಳುತ್ತಿದ್ದಾನೆಂದು ತಪ್ಪು ಗ್ರಹಿಸಿ "ನೀವು ಪ್ರೀತಿಯಿಂದ ಯಾವ ಒಡವೆ ಮಾಡಿಸಿಕೊಟ್ಟರೂ ಹಾಕಿಕೊಳ್ಳುತ್ತೇನೆ" ಎಂದು ನಾಚಿ ನುಡಿದಳು. ಒಳಗೆ ಹೋಗಿ ಗಂಡ ಕೇಳಿದ್ದನ್ನು ಮಗಳೊಂದಿಗೆ ಹಿಗ್ಗಿನಿಂದ ಹೇಳಿಕೊಂಡಳು. ವಯಸ್ಸಿಗೆ ಬಂದ ಮಗಳು ಮದುವೆಯ ಗುಂಗಿನಲ್ಲಿದ್ದಳು. ಅಕೆಯೂ ಸರಿಯಾಗಿ ಕೇಳಿಸಿಕೊಳ್ಳದೆ "ನೀವು ನನ್ನನ್ನು ಒಬ್ಬ ಕುಂಟನಿಗಾದರೂ ಕೊಡಿ, ಕುರುಡನಿಗಾದರೂ ಕೊಡಿ, ನೀವು ತೋರಿಸಿದ ಗಂಡನ್ನು ಮದುವೆಯಾಗುತ್ತೇನೆ" ಎಂದು ವೈಯ್ಯಾರದಿಂದ ಹೇಳಿದಳು. ಆ ಹುಡುಗಿ ನಂತರ ಮನೆಯ ಕೆಲಸದಾಕೆಯ ಹತ್ತಿರ ಹೋಗಿ ತಂದೆ-ತಾಯಿ ತನಗೆ ಗಂಡನ್ನು ನೋಡುತ್ತಿರುವುದಾಗಿ ಖುಷಿಯಿಂದ ಹೇಳಿಕೊಂಡಳು. ಕೆಲಸದಾಕೆಯೂ ಕಿವುಡಿ. ಬಹಳ ವರ್ಷಗಳ ಕಾಲ ನಿಷ್ಠೆಯಿಂದ ಮನೆಗೆಲಸವನ್ನು ಮಾಡಿಕೊಂಡು ಬಂದಿದ್ದ ಆಕೆ ಮನೆಯ ಯಜಮಾನಿತಿ ತನಗೆ ಎಂಥಾ ಸೀರೆ ಬೇಕೆಂದು ಕೇಳಲು ಹೇಳಿಕಳುಹಿಸಿದ್ದಾಳೆಂದು ತಪ್ಪು ಗ್ರಹಿಸಿ "ನೀವು ಉಟ್ಟ ಸೀರೆಯನ್ನಾದರೂ ಕೊಡಿ, ಹರಿದ ಸೀರೆಯನ್ನಾದರೂ ಕೊಡಿ, ಕೊಟ್ಟದ್ದನ್ನು ಉಟ್ಟುಕೊಳ್ಳುತ್ತೇನೆ. ನಾನು ಇಂತಹುದೇ ಬೇಕೆಂದು ಎಂದಾದರೂ ಕೇಳಿದ್ದೇನೆಯೇ?" ಎಂದು ದೈನ್ಯದಿಂದ ನುಡಿದಳು. ಗಂಡನಿಗೆ ಜಮೀನಿನ ಗುಂಗು, ಹೆಂಡತಿಗೆ ಒಡವೆಯ ಗುಂಗು, ಮಗಳಿಗೆ ಮದುವೆ ಗುಂಗು, ಕೆಲಸದಾಕೆಗೆ ಸೀರೆಯ ಗುಂಗು! ಇಂತಹ ಗುಂಗಿನಲ್ಲಿರುವ ಜನರನ್ನು ಕಂಡೇ ನಿಷ್ಠುರವಾದಿ ಶರಣನಾದ ಅಂಬಿಗರ ಚೌಡಯ್ಯನವರು ಹೇಳಿದ್ದು:

**ಬಡತನಕ್ಕೆ ಉಂಬುವ ಚಿಂತೆ**
**ಉಣಲಾದರೆ ಉಡುವ ಚಿಂತೆ**
**ಉಡಲಾದರೆ ಇಡುವ ಚಿಂತೆ**
**ಇಡಲಾದರೆ ಹೆಂಡಿರ ಚಿಂತೆ**
**ಹೆಂಡಿರಾದರೆ ಮಕ್ಕಳ ಚಿಂತೆ**

ಮಕ್ಕಳಾದರೆ ಬದುಕಿನ ಚಿಂತೆ
ಬದುಕಾದರೆ ಕೇಡಿನ ಚಿಂತೆ
ಕೇಡಾದರೆ ಮರಣದ ಚಿಂತೆ
ಇಂತೀ ಹಲವು ಚಿಂತೆಯಲ್ಲಿ ಇಪ್ಪವರ ಕಂಡೆ
ಶಿವಚಿಂತೆಯಲ್ಲಿದ್ದವರೊಬ್ಬರನೂ ಕಾಣೆನೆಂದಾತ
ನಮ್ಮ ಅಂಬಿಗರ ಚೌಡಯ್ಯ!

4.8.2010

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑